ಬೆಂಗಳೂರು ಮಹಾಧರ್ಮಕ್ಷೇತ್ರ

# ಸುತ್ತೋಲೆ



ಮಹಾಧರ್ಮಾಧ್ಯಕ್ಷರ ನಿಲಯ, 75, ಮಿಲ್ಲರ್ಸ್ ರಸ್ತೆ, ಬೆನ್ಸನ್ ಟೌನ್ ಅಂಚೆ
ಬೆಂಗಳೂರು – 560 046, ಕರ್ನಾಟಕ, ಭಾರತ, ದೂರವಾಣಿ: 23330438, ಫ್ಯಾಕ್ಸ್: 080–23531600
ಇ–ಮೇಲ್: archbishop@bangalorearchdiocese.com, ವೆಬ್‌ಸೈಟ್: www. bangalorearchdiocese.com

No. 5 ಅಕ್ಟೋಬರ್ 2018

ಒಲವಿನ ಗುರುಗಳೇ, ಧಾರ್ಮಿಕ ಸಹೋದರ–ಸಹೋದರಿಯರೇ ಮತ್ತು ದೈವಪ್ರಜೆಗಳೇ,

## 1. ಅಕ್ಟೋಬರ್ ಮಾಸ – ಜಪಸರದ ಮಾಸ

7ನೇ ಅಕ್ಟೋಬರ್‌ರಂದು ಜಪಸರ ಮಾತೆಯ ಹಬ್ಬ ಹಾಗೂ 13ನೇ ಅಕ್ಟೋಬರ್ ರಂದು ಪುಟ್ಟ ಮಕ್ಕಳಿಗೆ ಫಾತಿಮ ಮಾತೆಯು ದರ್ಶನ ಕೊಟ್ಟ ದಿನವಾಗಿದೆ. ಅನಾದಿ ಕಾಲದಿಂದಲೂ ಜಪಸರವನ್ನು ಶ್ರೀಸಾಮಾನ್ಯರ ದೈನಂದಿನ ಪ್ರಾರ್ಥನಾ ಕೈಪಿಡಿ ಎಂದು ಕರೆಯಲಾಗುತ್ತದೆ. ಈ ಸಂಪ್ರದಾಯಿಕ ಭಕ್ತಿಯು ಕ್ರೈಸ್ತ ಕುಟುಂಬಗಳಲ್ಲಿ ಜಪಸರ ಪ್ರಾರ್ಥನೆ ಜೀವನೆಲೆಯಾಗಿದೆ. ಆದರೆ ದುರದೃಷ್ಟವಶಾತ್ ಕಾಲವು ಬದಲಾಗಿದೆ. ಕುಟುಂಬಗಳಲ್ಲಿ ಇದು ಇಷ್ಟಪಡದ ಭಕ್ತಿಯಾಚರಣೆಯಾಗಿರುವುದು ದುರದೃಷ್ಟಕರವೆನಿಸಿದೆ. ನಗರೀಕರಣದ ಪ್ರಭಾವ ಹಾಗು ಕೆಲಸದ ಒತ್ತಡಗಳಿಂದ ಜಪಸರ ಪ್ರಾರ್ಥನೆಗೆ ಸಮಯವಿಲ್ಲದಂತಾಗಿದೆ. ಈ ಸಂದರ್ಭದಲ್ಲಿ ಜಪಸರ ಮಾಡುವ ಹವ್ಯಾಸವನ್ನು ನಮ್ಮ ಪಾಲನಾ ಕಾರ್ಯಗಳಲ್ಲಿ ಅದರಲ್ಲೂ ವಿಶೇಷವಾಗಿ ನಮ್ಮ ಕುಟುಂಬಗಳಲ್ಲಿ ಮತ್ತೆ ಆರಂಭಿಸುವಂತೆ ಮಾಡೋಣ.

## 2. ಧರ್ಮಪ್ರಸಾರ ಭಾನುವಾರದ ಆಚರಣೆ

ಸಂತ ದ್ವಿತೀಯ ಜಾನ್ ಪೌಲರು "ನಮ್ಮ ವಿಶ್ವಾಸವನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವುದರ ಮೂಲಕ ವೃದ್ಧಿಗೊಳ್ಳುತ್ತದೆ" ಎಂದು ಹೇಳಿದ್ದಾರೆ. ಇದುವೇ ಧರ್ಮಪ್ರಸಾರ ಭಾನುವಾರದ ಅರ್ಥ ಮತ್ತು ತಿರುಳಾಗಿದೆ. ನಮ್ಮ ಕೊಡುಗೆಗಳು ಧರ್ಮಪ್ರಸಾರಕ್ಕೆ ಮೂಲವಾಗಿದ್ದರೂ, ಅಷ್ಟಕ್ಕೆ ನಾವು ನಿಲ್ಲಬಾರದು. ಪ್ರೇಷಿತರಂತೆ ನಾವು ಧರ್ಮಪ್ರಸಾರಕರಾಗಬೇಕು. ಹಾಗೆಯೇ ನಮ್ಮ ವಿಶ್ವಾಸವನ್ನು ಹಂಚಿಕೊಳ್ಳಬೇಕಾದಲ್ಲಿ ನಮ್ಮ ವಿಶ್ವಾಸವು ಸ್ಥಿರವಾಗಿರಬೇಕು. ಯಾರು ಕ್ರಿಸ್ತರನ್ನು ಸಂಪೂರ್ಣವಾಗಿ ಹಿಂಬಾಲಿಸುತ್ತಾರೋ, ಅಂತವರೇ ಯೇಸುವನ್ನು ಇತರರಿಗೆ ನೀಡಲು ಸಾಧ್ಯ.

ಮೂಲತಃ ಧರ್ಮಸಭೆಯು ಮಿಶಿನರಿಯಾಗಿದೆ. ಈ ಅಂಶವನ್ನು ಧರ್ಮಪ್ರಸಾರ ಭಾನುವಾರದಂದು ನಮ್ಮ ಮಹಾಧರ್ಮಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಅರ್ಥೈಸ ಬೇಕಾಗಿದೆ. ಇದೊಂದು ವಾರ್ಷಿಕ ಕಾರ್ಯಕ್ರಮವಾದರೂ ನಮ್ಮ ಧರ್ಮಕ್ಷೇತ್ರದ ಹಾಗೂ ವಿಶ್ವದಾದ್ಯಂತ ಕ್ರೈಸ್ತ ಪ್ರಸನ್ನತೆಯಿರದ ಸ್ಥಳಗಳು ನಮಗೆ ಈ ನಿಟ್ಟಿನಲ್ಲಿ ಸವಾಲಾಗಿ ಇದೆ.

ವಿಶ್ವಗುರು ಫ್ರಾನ್ಸಿಸರು ಅಕ್ಟೋಬರ್ 2018 ಅನ್ನು "ಧರ್ಮಪ್ರಸಾರದ ಅಸಾಧಾರಣ ಮಾಸ" ಎಂದು ಘೋಷಿಸಿದ್ದಾರಲ್ಲದೆ ಇಡೀ ಧರ್ಮಸಭೆಯಲ್ಲಿ ಮತ್ತು ಧರ್ಮಪ್ರಸಾರ ಕಾರ್ಯವನ್ನು ಸಂತ ದ್ವಿತೀಯ ಜಾನ್ ಪೌಲರ ಆಸರೆಗೆ ವಹಿಸಿಕೊಡಲಾಗಿದೆ.

ಧರ್ಮಪ್ರಸಾರದ ಪಾಲನಾ ಕಾರ್ಯವು, ನಿರಾಶ್ರಿತರು ಮತ್ತು ನಿರ್ಗತಿಕರ ಸೇವೆ ಹಾಗೂ ಪಾಲನಾ ಕಾರ್ಯಗಳಲ್ಲಿ ಅಡಕಗೊಂಡಿದೆ. ಹಿಂದಿನ ವರ್ಷಗಳ ರೀತಿಯಲ್ಲಿಯೇ, ನಮ್ಮ ಮಹಾಧರ್ಮಕ್ಷೇತ್ರದ ಧರ್ಮಕೇಂದ್ರಗಳು, ಹೆಚ್ಚು ಹೆಚ್ಚು ಕಾಣಿಕೆಗಳನ್ನು ಧರ್ಮಪ್ರಸಾರಕ್ಕಾಗಿ ಸಂಗ್ರಹಿಸುತ್ತಿರುವುದು ಸಂತೋಷದ ವಿಷಯವೆನಿಸಿದೆ. ಅದೇ ಮೇರೆಗೆ ಈ ವರ್ಷವು ನಮ್ಮ ಕಾಣಿಕೆಯು ಹೆಚ್ಚಾಗಿ ಸಂಗ್ರಹವಾಗಲು ಧರ್ಮಕೇಂದ್ರಗಳು ಪ್ರಯತ್ನಿಸಬೇಕು. ಪ್ರಸ್ತುತ ವರ್ಷದಲ್ಲಿ ಅಕ್ಟೋಬರ್ 21ನೇ ತಾರೀಖಿನಂದು ಧರ್ಮಪ್ರಸಾರ ಭಾನುವಾರವನ್ನು ನಮ್ಮ ಮಹಾಧರ್ಮಕ್ಷೇತ್ರದಲ್ಲಿ ಆಚರಿಸಲಾಗುವುದು.

## 3. ಕೊಡಗು ಮತ್ತು ಕೇರಳಕ್ಕೆ ಪ್ರವಾಹ ಪರಿಹಾರ ಕಾಣಿಕೆ

ಮಹಾಧರ್ಮಕ್ಷೇತ್ರದ ಪ್ರವಾಹ ಪರಿಹಾರ ಕಾರ್ಯಪಡೆಯೊಂದಿಗೆ ದಿನಾಂಕ 18 ಮತ್ತು 19ನೇ ಸೆಪ್ಟೆಂಬರ್‌ರಂದು ಕೊಡಗು ಪ್ರದೇಶಕ್ಕೆ ನಾನು ಸಂಧಿಸುವ ಸಹಯೋಗ ಲಭಿಸಿತು. ಮಾನವ ದುರಂತವನ್ನು ಕಣ್ಣಾರೆ ಕಂಡು ದಿಗ್ಭ್ರಮೆಗೊಂಡೆವು. ಎಲ್ಲವನ್ನು ಕಳೆದುಕೊಂಡು ಬೀದಿಪಾಲಾದವರ ಹೃದಯ ವಿದ್ರಾವಕ ಕಥೆಗಳು ದುಃಖವನ್ನು ಹೆಚ್ಚಿಸಿತು. ಹಾಗೆಯೇ ಹೊಸ ಆಶ್ರಯ ತಾಣಗಳಿಗೆ ಹಾಗೂ ಶಾಲೆಗಳಿಗೆ ಮಕ್ಕಳ ಸ್ಥಳಾಂತರವನ್ನು ಕಂಡಾಗ ದೇವರೇ ಧರೆಗಿಳಿದು ಬಂದಂತಹ ಅನುಭವ ಅಲ್ಲಿ ಕಾಣ ಬಹುದಿತ್ತು. ಧರ್ಮಸಭೆಯ ಸೇವಾಸಂಸ್ಥೆಗಳು ವಿಶೇಷವಾಗಿ ಮೈಸೂರು ಧರ್ಮಕ್ಷೇತ್ರದ ಅಭಿವೃದ್ಧಿ ಸಂಸ್ಥೆಯು, ಸರ್ಕಾರಿ ಹಾಗು ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ಸಂತ್ರಸ್ತರಿಗೆ ಭರವಸೆಯನ್ನು ಮೂಡಿಸುವ ತಕ್ಷಣದ ಪರಿಹಾರ ಕಾರ್ಯಗಳನ್ನು ಕೈಗೊಂಡಿದ್ದಾರೆ.

ಕೊಡಗು ಮತ್ತು ಕೇರಳದ ಪ್ರವಾಹ ಪರಿಹಾರಕ್ಕೆ ಮಹಾಧರ್ಮಕ್ಷೇತ್ರವು ಮಾಡಿದ ಭಿನ್ನಹದ ಪ್ರತಿಫಲವು ವಿಶೇಷವಾದುದಾಗಿದೆ. ಈಗಾಗಲೇ ನಾವು ಒಂದು ಕೋಟಿ ರೂಪಾಯಿಯನ್ನು 'ಕಾರಿತಾಸ್ ಇಂಡಿಯಾಗೆ' ಕಳುಹಿಸಲಾಗಿದೆ. ಹೀಗೆ ಕಳುಹಿಸಿ ಕೊಡುವಾಗ ಕೆಲವು ಸಲಹೆ ಹಾಗು ಸೂಚನೆಗಳನ್ನು ನೀಡುತ್ತಾ ವಿಶೇಷವಾಗಿ 50% ರಷ್ಟು ಕೊಡುಗೆಯನ್ನು ಕೊಡಗಿನ ಪುನರ್‌ನಿರ್ಮಾಣಕ್ಕೆ ಮತ್ತು ಪ್ರವಾಹದ ಪ್ರಯುಕ್ತ ವಸತಿ

ಕಳೆದುಕೊಂಡವರಿಗೆ ಮನೆಗಳನ್ನು ಕಟ್ಟಿಕೊಡಲು ಸೂಚಿಸಲಾಗಿದೆ. ಈ ಹಿನ್ನೆಲೆಯಲ್ಲಿ 23ನೇ ಸೆಪ್ಟೆಂಬರ್‌ರಂದು ಸೇರಿದ ಸಮಿತಿಯು ಕೆಳಗಿನ ಕೆಲವು ಅಂಶಗಳನ್ನು ಪ್ರಸ್ತಾಪಿಸಿದೆ.

1. ಪ್ರವಾಹ ಪರಿಹಾರ ವಸತಿಗಳ ನಿರ್ಮಾಣಕ್ಕೆ ಸರ್ಕಾರವು ಸಂತ್ರಸ್ತರಿಗಾಗಿ ಸ್ಥಳವನ್ನು ನಿಗದಿಪಡಿಸುವುದು ತಡವಾಗುವುದರಿಂದ ಡಿಸೆಂಬರ್ ತಿಂಗಳವರೆಗೆ ಅಂದರೆ ಇನ್ನೂ ಆರು ತಿಂಗಳವರೆಗೆ ಪರಿಹಾರ ನಿಧಿಯನ್ನು ಸಂಗ್ರಹಿಸುವುದು.

2. 'ಕಾರಿತಾಸ್ ಇಂಡಿಯಾಗೆ' ಸಂದಾಯ ಮಾಡಿರುವ ಹಣದಲ್ಲಿ ಅಂದಾಜು ಐದು ಲಕ್ಷ ರೂಗಳನ್ನು ಪ್ರತ್ಯೇಕ ಒಂದು ಮನೆಗೆ ಮೀಸಲಿಡಬೇಕು. ಹಾಗೆಯೇ ಪ್ರತ್ಯೇಕ ವ್ಯಕ್ತಿಗಳು, ಸಂಘ ಸಂಸ್ಥೆಗಳು ಹಾಗು ಧಾರ್ಮಿಕ ಸಂಸ್ಥೆಗಳು ಕೊಡಗು ಮತ್ತು ಕೇರಳದ ಪರಿಹಾರ ನಿಧಿಗೆ ದಾನಧರ್ಮ ಮಾಡುವುದರ ಮೂಲಕ ಪ್ರತ್ಯೇಕ ಮನೆಗಳನ್ನು ದಾನಿಗಳ ಹೆಸರಲ್ಲಿ ಕೆತ್ತಲಾಗುವುದು. ಈಗಾಗಲೇ ಸಂಗ್ರಹವನ್ನು ಕೈಗೊಂಡು ಮುಗಿಸಿರುವ ಧರ್ಮಕೇಂದ್ರಗಳು ಇನ್ನೂ ಐದು ಲಕ್ಷ ತಲುಪುವವರೆಗೂ ಸಂಗ್ರಹಿಸಲು ಪ್ರಯತ್ನಿಸಬೇಕು.

3. ಕಾರ್ಪೊರೇಟ್ ಕಂಪನಿಗಳು ಹಾಗು ಇತರ ಕ್ರೈಸ್ತ ಸಂಸ್ಥೆಗಳು ಕೊಡಗು ಮತ್ತು ಕೇರಳದ ಪ್ರವಾಹ ಪರಿಹಾರ ನಿಧಿಗಾಗಿ ನಿಧಿ ಸಂಗ್ರಹಿಸಲು ಆದಷ್ಟು ಮಟ್ಟಿಗೆ ಪ್ರೇರೇಪಿಸಬೇಕು.

4. ನಿಮ್ಮ ಕೊಡುಗೆಗಳನ್ನು ಕಳುಹಿಸಿಕೊಡಲು ಬೇಕಾದ ಮಾಹಿತಿಗಾಗಿ ಪುಟಸಂಖ್ಯೆ 14 ನ್ನು ನೋಡಿ.

## 4. ದೇವಾಲಯದ ಗಾನವೃಂದ ಮತ್ತು ದೈವಾರಾಧನಾ ಸಂಗೀತ

ದೇವಾಲಯದ ಗಾನವೃಂದದ ಬಗ್ಗೆ ಹಾಗು ದೈವಾರಾಧನಾ ಸಂಗೀತದ ವಿಷಯದಲ್ಲಿ ಮಹಾಧರ್ಮಕ್ಷೇತ್ರದಲ್ಲಿ ಪ್ರಧಾನ ಪಾತ್ರ ವಹಿಸಿರುವುದು ಅಭಿನಂದನಾರ್ಹ. ಆದರೆ ಇಲ್ಲಿ ಒಂದು ಎಚ್ಚರಿಕೆಯನ್ನು ನೀಡಲು ಬಯಸುತ್ತೇನೆ. ಆರಾಧನಾ ವಿಧಿಯಲ್ಲಿ ಸಂಗೀತವು ಆರಾಧನೆಗೆ ಪ್ರೇರಕವಾಗಿರಬೇಕು, ಹಾಗು ಅದು ಮನರಂಜನೆಗೆ ಕಾರಣವಾಗಬಾರದು.

ಭಾರತದ ಕಥೋಲಿಕ ಧರ್ಮಾಧ್ಯಕ್ಷರುಗಳ ಒಕ್ಕೂಟದ ನಿರ್ದೇಶನದ ಪ್ರಕಾರ ದೈವಾರಾಧನಾ ವಿಧಿಯಾಚರಣೆಗಳು, ನೆರೆದಿರುವ ಭಕ್ತವಿಶ್ವಾಸಿಗಳ ದನಿಯೇ ವಿಧಿಯಾಚರಣೆಯ ಸಂವಾದದ ಪ್ರಮುಖ ಚಿಹ್ನೆಯಾಗಿದೆ. ಹಾಗಾಗಿ ಯಾರ‍್ಯಾರು ಮೈಕ್ರೊ ಫೋನ್‌ಗಳನ್ನು ಬಳಸುತ್ತಾರೋ ಅಂತವರು ನೆರೆದ ಭಕ್ತವಿಶ್ವಾಸಿಗಳನ್ನು ಮೀರಿ ಶಬ್ದ ಹೊರ ಹಾಕುವ ಪ್ರಯತ್ನ ಮಾಡಬಾರದು.

ಹಲವಾರು ಧರ್ಮಕೇಂದ್ರಗಳಲ್ಲಿ ಗಾನವೃಂಧವು ಆರ್‌ಕೆಸ್ಟ್ರಾದಂತೆ ಕಾರ್ಯ ನಿರ್ವಹಿಸುತ್ತಿದ್ದು ಹೆಚ್ಚಾದ ಶಬ್ದದ ಸಂಗೀತ, ಉದ್ದನೆಯ ಮುನ್ನುಡಿಯಿಂದ ದೈವಾರಾಧನೆಗೆ ತೊಡಕಾಗಿದೆ. ಇದರ ಹಿನ್ನಲೆಯಲ್ಲಿ ಸಿ.ಸಿ.ಬಿ.ಐ ನಿರ್ದೇಶನವು ಎಚ್ಚರಿಕೆಯ ಮಾತುಗಳನ್ನು ಸಂಗೀತ ಸಲಕರಣೆಗಳ ಬಳಕೆಯಲ್ಲಿ ಹೀಗೆ ತಿಳಿಸುತ್ತದೆ, "ಸಂಗೀತ ಸಲಕರಣೆಗಳು ದನಿಗೆ ಸಹಕಾರಿಯಾಗಿ ಕಾರ್ಯನಿರ್ವಹಿಸುತ್ತದೆ, ಹೀಗೆ ಆರಾಧನೆಯಲ್ಲಿ ಪಾಲ್ಗೊಳ್ಳಲು ಸುಲಭವೆನಿಸುತ್ತದೆ ಹಾಗು ಸಭಿಕರೊಂದಿಗೆ ಆಳವಾದ ಬಾಂಧವ್ಯವನ್ನು ಮೂಡಿಸುತ್ತದೆ. ದೈವಾರಾಧನಾ ದಾಖಲೆಯಾದ 'ಲಿಟರ್‌ಜಿಯ ಇಸ್ತಾರಾಶಿಯೋಸ್' ಸಂಖ್ಯೆ 3ಸಿ ಯಲ್ಲಿ "ಸಂಗೀತ ಸಲಕರಣೆಗಳ ವಿಷಯದಲ್ಲಿ ವಿಶೇಷ ಕಾಳಜಿಯನ್ನು ತೆಗೆದುಕೊಳ್ಳಬೇಕು; ಅವು ಕೆಲವು ಮಾತ್ರವಿರಬೇಕು. ಸನ್ನಿವೇಶಕ್ಕೆ ಮತ್ತು ಸಭಿಕರಿಗೆ ಅದು ಯೋಗ್ಯವಾಗಿರಬೇಕು, ಹೆಚ್ಚು ಶಬ್ದಮಾಡದೆ ಪ್ರಾರ್ಥನೆಗೆ ಪ್ರೇರಣೆಯಾಗಿರಬೇಕು."

ಆದ್ದರಿಂದ ಎಲ್ಲಾ ಗುರುಗಳಿಗೂ ತಿಳಿಸುವುದೇನೆಂದರೆ ಈ ವಿಷಯದಲ್ಲಿ ದೈವಾರಾಧನಾ ಗಾನವೃಂದಕ್ಕೂ ಸೂಕ್ತ ಸಂಗೀತದ ಆಯ್ಕೆ ಮಾಡುವುದರ ಬಗ್ಗೆ ಅರಿವು ಮೂಡಿಸಬೇಕು. ಅವಶ್ಯಕತೆಯಿದ್ದಾಗ ತಕ್ಕ ಹಾಡುಗಳನ್ನು ಕಲಿಸಿಕೊಡುವುದರ ಮೂಲಕ ಪಾಲ್ಗೊಳ್ಳುವಿಕೆಯೂ ಉತ್ತಮವೆನಿಸುತ್ತದೆ.

## 5. ಕಮ್ಯುನಿಯೊ ಇಂಡಿಯ

ಭಾರತದ ಕಥೋಲಿಕ ಧರ್ಮಾಧ್ಯಕ್ಷರುಗಳ ಒಕ್ಕೂಟವು 'ಕಮ್ಯುನಿಯೊ ಇಂಡಿಯಾ' ವನ್ನು ಆರಂಭಿಸಿದೆ. ಇದು ಜರ್ಮನಿ ದೇಶದಲ್ಲಿನ 'ಮಿಸ್ಸಿಯೊ' ಮಾದರಿಯನ್ನು ಹೋಲುತ್ತದೆ. ಇದರ ಮೂಲೋದ್ದೇಶ ಮಿಶನ್ ಧರ್ಮಕ್ಷೇತ್ರ ಮತ್ತು ಧಾರ್ಮಿಕ ಸಂಸ್ಥೆಗಳು 'ಹಣಕಾಸಿನ ಮುಗ್ಗಟ್ಟು ಮತ್ತು ಪಾಲನಾ ಹಾಗು ಸುವಾರ್ತಾ ಕಾರ್ಯಕ್ಕಾಗಿ' ನೆರವಾಗಿರಲು ಇದನ್ನು ಆರಂಭಿಸಲಾಗಿದೆ. ಭಾರತದ ಕಥೋಲಿಕ ಧರ್ಮಾಧ್ಯಕ್ಷರುಗಳ ಕಛೇರಿಯಿಂದ ಬಂದಂತಹ ಸುತ್ತೋಲೆಯ ಪ್ರಕಾರ 'ನಮ್ಮ ದೇಶದ ಅಸಹಾಯಕ ಸಹೋದರ/ಸಹೋದರಿಯರೊಂದಿಗೆ ಬಾಂಧವ್ಯ ಮೂಡಿಸಲು ಕಮ್ಯುನಿಯೊದ ಮೂಲಕ ನೆರವಾಗುವ ಸಂಸ್ಕೃತಿಯನ್ನು ಬೆಳಸುವುದು, ಧರ್ಮಪ್ರಸಾರ ಕಾರ್ಯಗಳಿಗಾಗಿ ಪ್ರಾರ್ಥಿಸುವುದು, ಮಿಶಿನರಿ ದೈವೀಕರಗಳನ್ನು ಹೆಚ್ಚಿಸುವುದು ಹಾಗು ಭಕ್ತವಿಶ್ವಾಸಿಗಳನ್ನು ಪಾಲನಾ ಕಾರ್ಯಕ್ಕೆ ಅಣಿಗೊಳಿಸುವುದು.

ಭಾರತದ ಧರ್ಮಸಭೆಯ ವಿಶೇಷ ಕಾಳಜಿಯೇನೆಂದರೆ, 'ಕಮ್ಯುನಿಯೊ ಇಂಡಿಯಾ' ಭಾನುವಾರವನ್ನು ವಿಶ್ವಾಸದಲ್ಲಿ ಅರ್ಥಗರ್ಭಿತವಾಗಿ ನಮ್ಮ ಎಲ್ಲಾ ಧರ್ಮಕೇಂದ್ರ ಹಾಗೂ ಸಂಸ್ಥೆಗಳಲ್ಲಿ ಆಚರಿಸಬೇಕು. ಪವಿತ್ರ ಬಲಿಪೂಜೆಯನ್ನು ಆಚರಣೆ ಮಾಡುವುದರ ಮೂಲಕ ಮಿಶಿನರಿಗಳಿಗಾಗಿ ಹಾಗು ಧರ್ಮಸಭೆಯ ಸುವಾರ್ತಾ ಕಾರ್ಯಕ್ಕಾಗಿ ವಿಶೇಷ ಪ್ರಾರ್ಥನೆಗಳನ್ನು ಆರಾಧನಾ ವಿಧಿಗಳಲ್ಲಿ ಸೇರಿಸಬೇಕು. ಅಷ್ಟೇ ಅಲ್ಲದೆ ಅದೊಂದು ಪ್ರಾರ್ಥನಾ

ದಿನವಾಗಿಯೂ ಹಾಗು ಮಿಶಿನರಿ ಪ್ರೇಷಿತರಿಗೆ ಅರಿವು ಮೂಡಿಸುವ ದಿನವಾಗಬೇಕು. ಹಾಗೆಯೇ ನಮ್ಮ ಪ್ರಾರ್ಥನೆ ಮತ್ತು ದಾರಾಳ ಕೊಡುಗೆಗಳಿಂದ ಮಿಶಿನರಿಗಳನ್ನು ಉತ್ತೇಜಿಸಬೇಕು.

ಭಾರತದ ಕಥೋಲಿಕ ಧರ್ಮಾಧ್ಯಕ್ಷರುಗಳ ಒಕ್ಕೂಟವು ಆಗಮನ ಕಾಲದ ಮೊದಲನೇ ಭಾನುವಾರ ಅಥವಾ ಸಂತ ಫ್ರಾನ್ಸಿಸ್ ಕ್ಸೇವಿಯರ್‌ರವರ ಹಬ್ಬಕ್ಕೆ ಹತ್ತಿರದ ಭಾನುವಾರವನ್ನು 'ಕಮ್ಯುನಿಯೊ ಇಂಡಿಯಾ ಭಾನುವಾರವನ್ನಾಗಿ' ಆಚರಿಸಲು ಸೂಚಿಸಿದೆ. ಅಂದಿನ ಬಲಿಪೂಜಾ ಕಾಣಿಕೆಯನ್ನು 'ಕಮ್ಯುನಿಯೊ ಇಂಡಿಆ ನಿಧಿ'ಯ ಉತ್ಪತ್ತಿಗಾಗಿ ಮೀಸಲಿಡಲಾಗುವುದು.

## 6. ಉಚ್ಛ ನ್ಯಾಯಾಲಯದ ತೀರ್ಪು: ಪ್ರವೇಶ, ನೈರ್ಮಲ್ಯ, ಧಾರ್ಮಿಕ ಸ್ಥಳಗಳ ಸ್ವತ್ತುಗಳ ಕುರಿತು

ನಿರ್ಣಾಯಕ ಆದೇಶವೊಂದರಲ್ಲಿ, ಭಾರಿ ನ್ಯಾಯಾಂಗ ಲೆಕ್ಕ ಪರಿಶೋಧನೆಯಡಿಯಲ್ಲಿ ಎಲ್ಲಾ ಧಾರ್ಮಿಕ ಸಂಸ್ಥೆಗಳ ಹಾಗು ಚಾರಿಟೇಬಲ್ ಸಂಸ್ಥೆಗಳಲ್ಲಿ ನೈರ್ಮಲ್ಯದ ತಪಾಸಣೆ, ಸ್ವತ್ತುಗಳ ಲೆಕ್ಕ ಪರಿಶೋಧನೆಯ ಬಗ್ಗೆ ಡಿಸ್ಟ್ರಿಕ್ಟ್ ನ್ಯಾಯಾಧೀಶರು ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದೂರುಗಳನ್ನು ಪರಿಶೀಲಿಸಿ ಉನ್ನತ ನ್ಯಾಯಾಲಯಕ್ಕೆ ಕಳುಹಿಸಿಕೊಡಬೇಕು. ಅದನ್ನು ಸಾರ್ವಜನಿಕ ಹಿತಾಸಕ್ತಿಯ ದಾವೆ (PIL) ಎಂದು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಉಚ್ಛ ನ್ಯಾಯಾಲಯದ ಈ ತೀರ್ಪು ಮಂದಿರ, ಮಸೀದಿ ಮತ್ತು ಚರ್ಚುಗಳಿಗೂ, ಧಾರ್ಮಿಕ ಸೇವಾ ಸಂಸ್ಥೆಗಳಿಗೂ ಹಾಗೂ ಚಾರಿಟೇಬಲ್ ಸಂಸ್ಥೆಗಳಿಗೂ ಅನ್ವಯಿಸುತ್ತದೆ.

ಮೇಲಿನ ಈ ತೀರ್ಪು ಕಾಣಿಕೆ ಮತ್ತು ಕೊಡುಗೆಗಳ ವಿಷಯವನ್ನು ಒಳಗೊಂಡಿರುವುದರಿಂದ ಗಂಭೀರ ಪರಿಣಾಮಗಳನ್ನು ಅದು ಒಳಗೊಂಡಿದೆಯೆಂಬುದನ್ನು ನಾವು ಮರೆಯಬಾರದು.

## 7. ಪವಿತ್ರ ಬಲಿಪೂಜಾ ಪಂಚಾಂಗ 2018–2019

ಮಹಾಧರ್ಮಕ್ಷೇತ್ರದ ದೈವಾರಾಧನಾ ಸಮಿತಿಯು ಪವಿತ್ರ ಬಲಿಪೂಜಾ ಪಂಚಾಂಗ 2018–2019ಕ್ಕೆ ಬೆಂಗಳೂರು ಮಹಾಧರ್ಮಕ್ಷೇತ್ರಕ್ಕಾಗಿ ಸಿದ್ಧಗೊಳಿಸಿದೆ.

2018–19ನೇ ಸಾಲಿನ ಪವಿತ್ರ ಬಲಿಪೂಜಾ ಪಂಚಾಂಗವನ್ನು ಸಿದ್ಧಗೊಳಿಸಲು ಸಹಾಯ ಮಾಡಿದ ದೈವಾರಾಧನ ಸಮಿತಿ ಹಾಗೂ ಮಹಾಧರ್ಮಾಧ್ಯಕ್ಷರ ಕಾರ್ಯಾಲಯ ಕಛೇರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಪವಿತ್ರ ಬಲಿಪೂಜಾ ಪಂಚಾಂಗವು ದೊರೆಯುವ ಸ್ಥಳದ ಮಾಹಿತಿಗಾಗಿ ದಯವಿಟ್ಟು ಪುಟಸಂಖ್ಯೆ 17 ನ್ನು ನೋಡಿ.

## 9. ಸೇವಾದರ್ಶಿಗಳ ಪಾಲನಾ ಸೇವೆ

ಯಾಜಕದೀಕ್ಷೆಗೆ ಮುನ್ನ ಪಾಲನಾ ಸೇವಾನುಭವವನ್ನು ಪಡೆಯಲು ನಮ್ಮ ಮಹಾಧರ್ಮಕ್ಷೇತ್ರಕ್ಕೆ ಸೇರಿದ ಮೂರು ಸೇವಾದರ್ಶಿಗಳನ್ನು ಬೇರೆ ಬೇರೆ ಧರ್ಮಕೇಂದ್ರಗಳಿಗೆ ಕಳುಹಿಸಿಕೊಡಲಾಗಿದೆ. ಪಾಲನಾ ಸೇವೆಗೆ ಬೇಕಾಗಿರುವ ಭಾಷೆಗಳನ್ನು ಕಲಿಯಬೇಕಲ್ಲದೆ, ಜನರ ಆಧ್ಯಾತ್ಮಿಕ ಮತ್ತು ಲೌಕಿಕ ಅವಶ್ಯಕತೆಗಳನ್ನು ಕಂಡುಕೊಳ್ಳಬೇಕು. ದೇವರ ವಾಕ್ಯವನ್ನು ಸಾರಲು ಸರಿಯಾದ ಸಿದ್ಧತೆ ಮಾಡಬೇಕು. ಹಾಗು ದಿವ್ಯಸಂಸ್ಕಾರಗಳನ್ನು ಭಕ್ತಿ ಮತ್ತು ಯೋಗ್ಯ ರೀತಿಯಲ್ಲಿ ಆಚರಿಸಲು ತಯಾರಾಗಬೇಕು. ಪಾಲನಾ ಕಾರ್ಯಗಳನ್ನು ತಕ್ಕ ರೀತಿಯಲ್ಲಿ ನಿರ್ವಹಿಸಲು ಕಾರ್ಯನಿಪುಣತೆಯನ್ನು ಪಡೆಯಬೇಕೆಂಬುದೇ ಸೇವಾದರ್ಶಿಗಳ ಪಾಲನಾ ಸೇವೆಯ ಉದ್ದೇಶವಾಗಿದೆ.

## 10. ಮಹಾಧರ್ಮಕ್ಷೇತ್ರದ ಕಾರ್ಯದರ್ಶಿಗಳ/ಜಂಟಿ ಕಾರ್ಯದರ್ಶಿಗಳ ಮರುನೇಮಕ /ನೇಮಕ

ಕಾರ್ಯದರ್ಶಿಗಳ ಮತ್ತು ಜಂಟಿ ಕಾರ್ಯದರ್ಶಿಗಳ ಸೇವಾವಧಿಯು ಅಕ್ಟೋಬರ್ 2018ರಿಂದ ಮೊದಲ್ಗೊಂಡು ಮೂರು ವರ್ಷಗಳಾಗಿರುತ್ತದೆ.

ವಿವರಗಳಿಗೆ ದಯವಿಟ್ಟು ಪುಟ 18 ನ್ನು ನೋಡಿ.

## 11. ವರ್ಗಾವಣೆಗಳು ಮತ್ತು ನೇಮಕಾತಿಗಳು

ವಿವರಗಳಿಗೆ ದಯವಿಟ್ಟು ಪುಟ 22 ನ್ನು ನೋಡಿ.

## 12. ಅಕ್ಟೋಬರ್ ತಿಂಗಳಿನಲ್ಲಿ ಬರುವಂತಹ ಮಹಾಧರ್ಮಕ್ಷೇತ್ರದ ಗುರುಗಳ ಹುಟ್ಟು ಹಬ್ಬ

ವಿವರಗಳಿಗೆ ದಯವಿಟ್ಟು 23 ನ್ನು ನೋಡಿ.

## 13. ಅಕ್ಟೋಬರ್ ತಿಂಗಳಿನಲ್ಲಿ ಬರುವಂತಹ ಮಹಾಧರ್ಮಕ್ಷೇತ್ರದ ಗುರುಗಳ ಯಾಜಕೀಯ ಆಚರಣೆ

ವಿವರಗಳಿಗೆ ದಯವಿಟ್ಟು 23 ನ್ನು ನೋಡಿ.

## 14. ಅಕ್ಟೋಬರ್ ತಿಂಗಳಿನಲ್ಲಿ ಬರುವಂತಹ ಮಹಾಧರ್ಮಕ್ಷೇತ್ರದ ಗುರುಗಳ ಸಂತರ ಹಬ್ಬದ ಆಚರಣೆ

ವಿವರಗಳಿಗೆ ದಯವಿಟ್ಟು 23 ನ್ನು ನೋಡಿ.

## 14. ವಿಶ್ವ ಸುವಾರ್ತಾ ದಿನಾಚರಣೆ – 2018, ವಿಶ್ವಗುರು ಫ್ರಾನ್ಸಿಸರ ಸಂದೇಶ

**"ಯುವಜನರೊಂದಿಗೆ ಎಲ್ಲರಿಗೂ ಶುಭಸಂದೇಶವನ್ನು ತರೋಣ**

ನಲ್ಮೆಯ ಯುವ ಜನರೇ, ಪ್ರಭುಕ್ರಿಸ್ತರಿಂದ ನಾವು ಸ್ವೀಕರಿಸಿದ ನಿಯೋಗದ ಬಗ್ಗೆ ನಿಮ್ಮೊಂದಿಗೆ ಪರ್ಯಾಲೋಚಿಸಲು ನಾನು ಅಪೇಕ್ಷಿಸುತ್ತೇನೆ. ನಿಮ್ಮೊಂದಿಗೆ ನಾನು ಮಾತನಾಡುತ್ತಿರುವಂತೆ ಧರ್ಮಸಭೆಯಲ್ಲಿ ದೇವರ ಮಕ್ಕಳಾಗಿ ತಮ್ಮ ಜೀವನದ ಜಂಜಡದಲ್ಲಿ ತೊಡಗಿರುವ ಕ್ರೈಸ್ತರನ್ನೂ ನಾನು ಸಂಬೋಧಿಸುತ್ತೇನೆ. ನಿಮ್ಮೊಡನೆ ಸಂವಾದಿಸುತ್ತಾ ಎಲ್ಲರೊಡನೆ ಮಾತನಾಡಲು ನನ್ನನ್ನು ಪ್ರಚೋದಿಸುತ್ತಿರುವುದು ಏನೆಂದರೆ: ಕ್ರೈಸ್ತ ವಿಶ್ವಾಸ ಸೇವಾನಿಯೋಗಕ್ಕೆ ಮುಕ್ತವಾಗಿದೆ ಮತ್ತು ಅದು ಸದಾ ತಾರುಣ್ಯದಿಂದಿರುತ್ತದೆ ಎಂಬ ನಿಖರತೆಯೇ ಆಗಿದೆ. "ಸೇವಾ ನಿಯೋಗ ವಿಶ್ವಾಸವನ್ನು ಸಚೇತನಗೊಳಿಸುತ್ತದೆ" (ರಕ್ಷಕರ ನಿಯೋಗ, ಸಂಖ್ಯೆ 2) ಎಂದ ವಿಶ್ವಗುರು ಸಂತ ಜಾನ್ ಪೌಲ್ II ಅವರು ಯುವ ಜನರ ಬಗ್ಗೆ ಅಪಾರ ಪ್ರೀತಿ ಮತ್ತು ಕಾಳಜಿಯನ್ನು ವ್ಯಕ್ತಪಡಿಸಿದರು.

ಅಕ್ಟೋಬರ್ ತಿಂಗಳು ಸುವಾರ್ತಾ ನಿಯೋಗದ ತಿಂಗಳು. ರೋಮಿನಲ್ಲಿ ಜರುಗಲಿರುವ ಸಿನೋಡ್ ಸಭೆ ವಿಶ್ವಾಸದ ಬೆಳಕಿನಲ್ಲಿ ಯುವಜನರಾದ ನಿಮಗೆ ಪ್ರಭುಯೇಸು ಏನನ್ನು ಹೇಳಲು ಅಪೇಕ್ಷಿಸುತ್ತಾರೆ ಮತ್ತು ನಿಮ್ಮ ಮುಖಾಂತರ ಎಲ್ಲಾ ಕ್ರೈಸ್ತ ಸಮುದಾಯಗಳಿಗೆ ಏನನ್ನು ಹೇಳಲು ಅಪೇಕ್ಷಿಸುತ್ತಾರೆ ಎಂಬುದನ್ನು ಅತಿ ಪೂರ್ಣವಾಗಿ ಅರ್ಥಮಾಡಿಕೊಳ್ಳುವ ಅವಕಾಶವನ್ನು ಕಲ್ಪಿಸಿಕೊಡುತ್ತದೆ.

### ಜೀವನವೇ ಸುವಾರ್ತಾ ನಿಯೋಗ

ಪ್ರತಿಯೊಬ್ಬ ಪುರುಷ ಮತ್ತು ಸ್ತ್ರೀ ಒಬ್ಬ ಸುವಾರ್ತಾ ನಿಯೋಗಿ. ಅದುವೇ ಈ ಲೋಕದಲ್ಲಿ ನಾವು ಜೀವಿಸುವ ಉದ್ದೇಶ. ನಮ್ಮ ಹೃದಯಗಳು ಆಕರ್ಷಿತರಾಗುವ ಮತ್ತು ದಿಸೆ ತೋರಿ ಕಳುಹಿಸುವ ಎರಡು ಚಾಲನೆಗಳನ್ನು ಎದುರಿಸುತ್ತದೆ. ಪ್ರತ್ಯೇಕವಾಗಿ ನಾವು ಯುವಜನರಾಗಿರುವಾಗ ಅಂತರಿಕ ಪ್ರೀತಿಯ ಒತ್ತಡವನ್ನು ಗಮನಿಸುತ್ತೇವೆ. ಈ ಚಾಲನೆಗಳು ನಮ್ಮ ಭವಿಷ್ಯಕ್ಕೆ ಒಂದು ವಾಗ್ದಾನವನ್ನೂ ಜೀವನಕ್ಕೆ ಒಂದು ಗುರಿಯನ್ನು ಎತ್ತಿ ಹಿಡಿಯುತ್ತವೆ. ಎಲ್ಲರಿಗಿಂತ ಮಿಗಿಲಾಗಿ ಯುವಜನರು ನಮ್ಮ ಮೇಲೆ ಎರಗುವ ಜೀವನ ಶಕ್ತಿಯ ಸಂವೇದನೆಯನ್ನು ಗ್ರಹಿಸುತ್ತಾರೆ. ಈ ಜಗತ್ತಿಗೆ ನಮ್ಮ ಹೊಣೆಗಾರಿಕೆಯನ್ನು ಆನಂದದಿಂದ ಸಲ್ಲಿಸುವುದು ದೊಡ್ಡ ಸವಾಲಾಗಿದೆ. ನನಗೆ ಯುವ ಜೀವನದ ಬೆಳಕು ಮತ್ತು ನೆರಳಿನ ಪರಿಜ್ಞಾನವಿದೆ. ನನ್ನ ಯೌವನ ಮತ್ತು ಕುಟುಂಬದ ಬಗ್ಗೆ ಯೋಚಿಸಿದಾಗ ನಾನು ಧೌವ್ಯ ಭವಿಷ್ಯದ ಭರವಸೆಯನ್ನು ಜ್ಞಾಪಿಸಿಕೊಳ್ಳುತ್ತೇನೆ. ನಾವು ಈ ಜಗತ್ತಿಗೆ ನಮ್ಮ ಸ್ವಂತ ಆಯ್ಕೆಯಿಂದ ಬರಲಿಲ್ಲ, ನಮಗಿಂತ ಹಿಂದೆ ಒಂದು ಉಪಕ್ರಮವಿತ್ತು, ಅದೇ ನಮ್ಮ ಅಸ್ತಿತ್ವಕ್ಕೆ ಕಾರಣ ಎಂಬ ಸಂವೇದನೆ ನಮಗಾಗುತ್ತದೆ. ನಮ್ಮಲ್ಲಿ ಪ್ರತಿಯೊಬ್ಬರೂ "ಈ ಜಗತ್ತಿನಲ್ಲಿ ನಾನೊಂದು ಸುವಾರ್ತಾ ನಿಯೋಗ; ಆದುದರಿಂದಲೇ ಈ ಭೂಲೋಕದಲ್ಲಿ

ನಾನಿದ್ದೇನೆ" (ಎವಾಂಜೆಲೀ ಗೌದಿಯುಂ 273) ಎಂಬ ವಿಷಯದ ಬಗ್ಗೆ ಆಲೋಚಿಸಲು ಕರೆಯಲ್ಪಟ್ಟಿದ್ದೇವೆ.

**ನಾವು ಯೇಸುಕ್ರಿಸ್ತರನ್ನು ಪ್ರಕಟಪಡಿಸುತ್ತೇವೆ**

ಧರ್ಮಸಭೆಯು ತಾನು ಉಚಿತವಾಗಿ ಪಡೆದುಕೊಂಡದ್ದನ್ನು ಪ್ರಕಟಿಸುತ್ತಾ (ಗಮನಿಸಿ, ಮತ್ತಾ 10:8; ಪ್ರೇ. 3:6) ಭೂಲೋಕದಲ್ಲಿ ನಮ್ಮ ಜೀವನಕ್ಕೆ ಅರ್ಥವೀಯುವ ಮಾರ್ಗ ಮತ್ತು ಸತ್ಯವನ್ನು ಯುವ ಜನರಾದ ನಿಮ್ಮೊಂದಿಗೆ ಹಂಚಿಕೊಳ್ಳುತ್ತದೆ. ನಮಗಾಗಿ ಸತ್ತು ಪುನರುತ್ಥಾನರಾದ ಯೇಸುಕ್ರಿಸ್ತರು ನಮ್ಮ ಸ್ವಾತಂತ್ರ್ಯಕ್ಕೆ ಕರೆಕೊಡುತ್ತಾ ಈ ಸತ್ಯದ ಮತ್ತು ಪರಿಪೂರ್ಣತೆಯ ಸಂದೇಶವನ್ನು ಅರಸಲು, ಅನ್ವೇಷಿಸಲು ಮತ್ತು ಸಾರಲು ಸವಾಲನ್ನು ಒಡ್ಡುತ್ತಾರೆ. ಪ್ರೀತಿಯ ಯುವಜನರೇ, ಪ್ರಭುಕ್ರಿಸ್ತರ ಮತ್ತು ಅವರ ಧರ್ಮಸಭೆಯ ಬಗ್ಗೆ ಭಯಭೀತರಾಗಬೇಡಿ! ಅದರಲ್ಲಿ ನಾವು ನಮ್ಮ ಜೀವನವನ್ನು ಆನಂದದಿಂದ ತುಂಬಿಸುವ ನಿಧಿಯನ್ನು ಕಂಡುಕೊಳ್ಳುತ್ತೇವೆ. ಇದನ್ನು ನನ್ನ ಸ್ವಂತ ಅನುಭವದಿಂದ ಹೇಳಬಲ್ಲೆ: ನಾನು ಪಡೆದ ವಿಶ್ವಾಸಕ್ಕೆ ಕೃತಜ್ಞತೆಗಳು, ಅದರಲ್ಲಿ ನನ್ನ ಕನಸ್ಸುಗಳಿಗೆ ಭದ್ರ ಬುನಾದಿಯನ್ನೂ ಅವನ್ನು ಕೈಗೂಡಿಸಲು ಶಕ್ತಿಯನ್ನೂ ಕಂಡುಕೊಂಡಿದ್ದೇನೆ. ನಾನು ನಮ್ಮ ಅನೇಕ ಸೋದರ ಸೋದರಿಯರ ಮುಖವನ್ನು ಕುರೂಪಗೊಳಿಸಿದ ಅಸಾಧ್ಯ ನೋವು ಮತ್ತು ಬಡತನವನ್ನು ಕಂಡಿದ್ದೇನೆ. ಆದರೆ ಯೇಸುಸ್ವಾಮಿಯ ಜೊತೆಗೆ ನಿಂತವರಿಗೆ ಕೆಡುಕು ಎಂಬುದು ಇನ್ನೂ ಅಧಿಕ ಪ್ರೀತಿಗೆ ಪ್ರೇರಕವಾಗಿದೆ. ಅನೇಕ ಸ್ತ್ರೀಪುರುಷರು ಮತ್ತು ಯುವಜನರು ಧರ್ಮಬಲಿಗಳಾಗುವ ಸಂದರ್ಭಗಳನ್ನೂ ಒಳಗೊಂಡಂತೆ ತಮ್ಮನ್ನೇ ಬಲಿಕೊಟ್ಟಿದ್ದಾರೆ. ಅದೆಲ್ಲವನ್ನು ಅವರು ಶುಭಸಂದೇಶದ ಮೇಲಿನ ಪ್ರೀತಿ ಮತ್ತು ತಮ್ಮ ಸೋದರ ಮತ್ತು ಸೋದರಿಯರ ಸೇವೆಗಾಗಿ ಮಾಡಿದ್ದಾರೆ. ಯೇಸುಸ್ವಾಮಿಯ ಶಿಲುಬೆಯ ಮುಖಾಂತರ ನಾವು ಸ್ವಬಲಿಯ ದೈವಿಕ ತರ್ಕವನ್ನು (ಗಮನಿಸಿ, 1 ಕೊರಿ 1:17–25) ಭೂಲೋಕದ ಸಜ್ಜೀವಕ್ಕಾಗಿ (ಗಮನಿಸಿ, ಯೊವಾ 3:16) ಶುಭಸಂದೇಶದ ಪ್ರಕಟಣೆಯಾಗಿ ಕಲಿಯುತ್ತೇವೆ. ಕ್ರಿಸ್ತರ ಪ್ರೀತಿಯಿಂದ ಉರಿಯುವುದು ಎಂದರೆ ಆ ಅಗ್ನಿಯಿಂದ ಸುಟ್ಟು ಬೂಧಿಯಾಗುವುದು, ಅದರಿಂದ ಉಗಮಿಸುವ ಬೆಳಕಿನಿಂದ ಅರಿವನ್ನು ಪಡೆಯುವುದು ಮತ್ತು ಆ ಪ್ರೀತಿಯಿಂದ ಬೆಚ್ಚಗಾಗುವುದು (ಗಮನಿಸಿ, 2 ಕೊರಿ 5:4). ದೇವರ ಅಗಮ್ಯ ದಿಗಂತವನ್ನು ತೆರೆದಿಡುವ ಸಂತ ಭಕ್ತರ ಶಾಲೆಯಲ್ಲಿ ನೀವೆಂದೂ ವಿಸ್ಮಯತೆಯಿಂದ ನಿರ್ಗಮಿಸದಂತೆ ನಾನು ನಿಮ್ಮನ್ನು ಆಮಂತ್ರಿಸುತ್ತೇನೆ: "ಪ್ರಭುಕ್ರಿಸ್ತರು ನಮ್ಮ ಸ್ಥಳದಲ್ಲಿ ಇದ್ದಿದ್ದರೆ ಅವರು ಏನು ಮಾಡುತ್ತಿದ್ದರು?"

**ಭೂಲೋಕದಾಂತ್ಯ ವಿಶ್ವಾಸದ ಸಂವಹನ**

ನೀವು ಸಹ ಯುವ ಮಿತ್ರರೇ, ನಿಮ್ಮ ದೀಕ್ಷಾಸ್ನಾನದ ಮುಖಾಂತರ ಧರ್ಮಸಭೆಯ ಸಜೀವ ಅಂಗಗಳಾಗಿದ್ದೀರಿ; ನಿಮ್ಮೊಂದಿಗೆ ನಾವೂ ಶುಭಸಂದೇಶವನ್ನು ಎಲ್ಲರಿಗೂ ತರುವ

ನಿಯೋಗವನ್ನು ಸ್ವೀಕರಿಸಿದ್ದೇವೆ. ನೀವು ನಿಮ್ಮ ಬಾಳಿನ ಹೊಸ್ತಿಲಿನಲ್ಲಿದ್ದೀರಿ. ಧರ್ಮಸಭೆಯ ಸಂಸ್ಕಾರಗಳು ನಮ್ಮ ಮೇಲೆ ಧಾರೆಯೆರೆಯುತ್ತಿರುವ ವಿಶ್ವಾಸದ ಕೃಪಾವರದ ಝರಿಯು ಸಾಕ್ಷಿಗಳ ದೊಡ್ಡ ತೊರೆಯಲ್ಲಿ ನಮ್ಮನ್ನು ಮುಳುಗಿಸುತ್ತದೆ. ಅವರು ವಂಶಾನುವಂಶ ಗತಿಯಲ್ಲಿ ಹಿರಿಯ ವ್ಯಕ್ತಿಗಳ ಸಾಕ್ಷ್ಯದ ಅನುಭವವನ್ನು ನಮಗೀಯುತ್ತಾ ನಮ್ಮನ್ನು ಸದೃಢಗೊಳಿಸುತ್ತಾ ಬಂದಿದ್ದಾರೆ. ಅವರು ಮುಂದಿನ ಭವಿಷ್ಯವನ್ನು ಎದುರು ನೋಡುವವರಿಗೆ ಉತ್ತೇಜನ ನೀಡುತ್ತಾ ಬಂದಿದ್ದಾರೆ. ಯುವಜನರ ಲವಲವಿಕೆ ಮತ್ತು ಚೇತನ ತಮ್ಮ ಜೀವನದ ಸಂಜೆ ಕೆತ್ತಲಿನಲ್ಲಿದ್ದು ತಮ್ಮ ಪ್ರಯಾಣದ ಅಂತ್ಯದಲ್ಲಿರುವವರಿಗೆ ಬೆಂಬಲ ಮತ್ತು ಭರವಸೆಯಾಗಿದೆ. ಜೀವನದ ವಿವಿಧ ಹಂತಗಳಲ್ಲಿರುವ ಸಮ್ಮಿಶ್ರಣಕ್ಕೆ ಧರ್ಮಸಭೆಯ ನಿಯೋಗ ವಂಶಾನುಗತಿಯ ಸೇತುವೆಯಾಗಿದೆ. ದೇವರಲ್ಲಿ ನಮ್ಮ ವಿಶ್ವಾಸ ಮತ್ತು ನೆರೆಯವರಲ್ಲಿ ನಮ್ಮ ಪ್ರೀತಿ ಐಕ್ಯತೆಯ ಗಾಢ ಬಂಧವಾಗಿದೆ.

ವಿಶ್ವಾಸದ ಸಂವಹನ ಧರ್ಮಸಭೆಯ ನಿಯೋಗದ ಹೃದಯ ಭಾಗವಾಗಿದ್ದು ಪ್ರೀತಿಯ ಸಾಂಕ್ರಾಮಿಕತೆಯಿಂದ ಹೊರಹೊಮ್ಮುತ್ತದೆ. ಇಲ್ಲಿ ಆನಂದ ಮತ್ತು ಉತ್ಸಾಹ ಜೀವನದ ಸಾರ್ಥಕತೆಯ ಅಭಿವ್ಯಕ್ತಿಯಾಗಿ ಹರಡುತ್ತದೆ. "ಆಕರ್ಷಣೆ"ಯಿಂದ ಪ್ರಸಾರವಾದ ವಿಶ್ವಾಸ ತೆರೆದ ಹೃದಯ ಮತ್ತು ಹಿಗ್ಗಿದ ಪ್ರೀತಿಯನ್ನು ಎದುರು ನೋಡುತ್ತದೆ. ಪ್ರೀತಿಯ ವ್ಯಾಪ್ತಿಗೆ ಇತಿಮಿತಿಯನ್ನು ವಿಧಿಸುವಂತಿಲ್ಲ, ಏಕೆಂದರೆ ಪ್ರೀತಿಯು ಮರಣದಂತೆ ಬಲಿಷ್ಠವಾದುದು (ಗಮನಿಸಿ, ಪರಮಗೀತೆ 8:6). ಈ ಹಿಗ್ಗುವಿಕೆ ಪರಸ್ಪರ ತಿಕ್ಕಾಟ, ಸಾಕ್ಷ್ಯ ಮತ್ತು ಪ್ರಕಟಣೆಯನ್ನು ಪ್ರೇರೇಪಿಸುತ್ತದೆ. ಅದು ವಿಶ್ವಾಸದಿಂದ ದೂರದಲ್ಲಿರುವವರೊಂದಿಗೆ ಪ್ರೀತಿಯ ಹಂಚಿಕೆಯನ್ನು ಪ್ರೇರೇಪಿಸುತ್ತದೆ. ಅನ್ಯ ಮನಸ್ಕನು ಮಾತ್ರವಲ್ಲ, ಶತ್ರುತ್ವವಿರುವವರೊಂದಿಗೂ ಪ್ರತಿಭಟನಾಕಾರರೊಂದಿಗೂ ಈ ಮಧುರ ಭಾವನೆಯನ್ನು ಸೃಷ್ಟಿಸುತ್ತದೆ. ಮಾನವ ಸಾಂಸ್ಕೃತಿಕ ಮತ್ತು ಧಾರ್ಮಿಕ ಚೌಕಟ್ಟುಗಳು, ಇನ್ನೂ ಯೇಸುಸ್ವಾಮಿಯ ಶುಭಸಂದೇಶ ಮತ್ತು ಸಂಸ್ಕಾರಿಕ ಪ್ರತ್ಯಕ್ಷತೆಗೆ ಹೊರತಾಗಿರುವ ಪರಿಧಿಗಳು "ಲೋಕಾಂತ್ಯ"ವನ್ನು ಸೂಚಿಸುತ್ತವೆ. ಇದೇ ಪರಿಸ್ಥಿತಿ ಪ್ರಭು ಪುನರುತ್ಥಾನದ ಸಂದರ್ಭದಲ್ಲಿ ಪ್ರಸ್ತುತವಾಗಿತ್ತು. ಆದುದರಿಂದಲೇ ಯೇಸುಸ್ವಾಮಿ ಶಿಷ್ಯರನ್ನು ಸುವಾರ್ತಾ ಪ್ರಸಾರಕರನ್ನಾಗಿ ಕಳುಹಿಸಿ ಅವರೊಡನೆ ತಾವು ಸದಾ ಇರುವುದಾಗಿ ಹೇಳಿದ್ದರು (ಗಮನಿಸಿ, ಮತ್ತಾ 28:28; ಪ್ರೇ. 1:8). ಇದನ್ನೇ ನಾವು "ಜನಾಂಗಗಳಿಗೆ ಸುವಾರ್ತಾ ನಿಯೋಗ"ವೆಂದು ಕರೆಯುತ್ತೇವೆ. ಎಲ್ಲಿ ಮಾನವ ಜನಾಂಗ ಪ್ರಭುಕ್ರಿಸ್ತರ ಅಗತ್ಯದಲ್ಲಿದ್ದು ವಿಶ್ವಾಸಕ್ಕೆ ಅನ್ಯ ಮನಸ್ಕರಾಗಿರುತ್ತಾರೋ, ದೇವರ ಪರಿಪೂರ್ಣ ಜೀವಕ್ಕೆ ದ್ವೇಷವನ್ನು ಪ್ರಕಟಿಸುತ್ತಾರೋ ಅದೇ ಚಿಂತಾಜನಕ ಸರಹದ್ದು. ಭೌತಿಕ ಮತ್ತು ಆಧ್ಯಾತ್ಮಿಕ ಬಡತನ, ಎಲ್ಲಾ ವಿಧವಾದ ತಾರತಮ್ಯ ನಮ್ಮ ಸೋದರ ಸೋದರಿಯರ ವಿರುದ್ಧ ದೇವರ ಮತ್ತು ಅವರ ಪ್ರೀತಿಯ ತಿರಸ್ಕಾರದ ಪರಿಣಾಮವಾಗಿದೆ.

ಪ್ರೀತಿಯ ಯುವಜನರೇ, ಈ ದಿನಗಳಲ್ಲಿ ಭೂಲೋಕದ ಗಡಿ ಎಂಬುದು ಸಾಕ್ಷೇಪ ಪದವಾಗಿದ್ದು "ನೌಕಾಯಾನ"ಕ್ಕೆ ಅಸಾಧ್ಯವಾಗಿಲ್ಲ. ಡಿಜಿಟಲ್ ವಿಶ್ವದಲ್ಲಿ, ಸಾಮಾಜಿಕ

ಜಾಲತಾಣಗಳಲ್ಲಿ ಮಾನವನ ಕೈವ್ಯಾಪ್ತಿಯೊಳಗಿದ್ದು ಸುಲಭವಾಗಿ ಸಿಗುವಂತಿವೆ. ಅದು ಎಲ್ಲೆಯನ್ನು ಕರೆಗಿಸುತ್ತದೆ, ಅಂತರವನ್ನು ಸಂಕುಚಿತಗೊಳಿಸುತ್ತದೆ, ವ್ಯತ್ಯಾಸಗಳನ್ನು ಕ್ಷೀಣಿಸುತ್ತದೆ. ಎಲ್ಲವೂ ಕೈತೋಳಿನಷ್ಟು ಸನಿಹದಲ್ಲಿರುವಂತೆ ತತ್‌ಕ್ಷಣಿಕವೂ ಆಗಿದೆ. ಆದರೆ ಅದು ನಮ್ಮ ಜೀವನದ ಪ್ರಾಮಾಣಿಕ ಕೊಡುಗೆಯ ಕೊರತೆಯಿಂದಾಗಿ ಅಸಂಖ್ಯಾತ ಸಂಪರ್ಕಗಳನ್ನು ಹೊಂದಬಹುದಾದರೂ ನಮ್ಮ ನೈಜ್ಯ ಜೀವನದ ಅನ್ಯೋನ್ಯತೆಯನ್ನು ಹಂಚಿಕೊಂಡಿಲ್ಲ. ಭೂಲೋಕದಾದ್ಯಂತದ ನಿಯೋಗದಲ್ಲಿ ಭಾಗವಹಿಸಲು ದೈವಕರೆಗೆ (ಗಮನಿಸಿ, ಲೂಕ 9:23–25) ಸ್ವಯಂ ಸೇವಕರ ಬೇಡಿಕೆ ಇದೆ. ಪ್ರಭುವನ್ನು ಹಿಂಬಾಲಿಸುವ ಯುವಕ ಮತ್ತು ಯುವತಿಯರು ತಮ್ಮ ಕರೆಯನ್ನು ಅರಸಬೇಕು, ಅನ್ವೇಷಿಸಬೇಕು ಮತ್ತು ಅದರಲ್ಲಿ ಮುಂದುವರಿಯಬೇಕು.

**ಪ್ರೀತಿಯ ಸಾಕ್ಷಾತ್ಕಾರ**

ಧರ್ಮಸಭೆಯಲ್ಲಿ ಸಜೀವವಾಗಿದ್ದು ಪ್ರಭುಕ್ರಿಸ್ತರೊಡನೆ ಸಂಬಂಧವನ್ನು ಏರ್ಪಡಿಸಿಕೊಳ್ಳಲು ಎಲ್ಲಾ ಸಾಧ್ಯತಾ ವಿಧಾನಗಳಿಂದ ಮುಂದಾಗಿರುವ ಅನೇಕ ಕ್ರೈಸ್ತ ಗುಂಪುಗಳಿವೆ: ಧರ್ಮಕೇಂದ್ರಗಳು, ಸಂಘ ಸಂಚಲನಗಳು, ಧಾರ್ಮಿಕ ಸಭೆಗಳು ಮತ್ತು ವಿಭಿನ್ನ ಸುವಾರ್ತಾ ಮಾಧ್ಯಮಗಳಿವೆ. ಇವೆಲ್ಲವುಗಳಿಗೆ ನಾನು ಕೃತಜ್ಞನಾಗಿದ್ದೇನೆ. ಆದರೆ ಎಷ್ಟು ಯುವಜನರು ಸುವಾರ್ತಾ ಸೇವಾ ಸ್ವಯಂಸೇವಕರಾಗಿ ನಮ್ಮ "ಕನಿಷ್ಠ" ಸಹೋದರ ಸಹೋದರಿಯರಿಗೆ ಆಧಾರವಾಗಿ ಜೀವಿಸುವವರನ್ನು ಕಾಣುತ್ತೇವೆ (ಮತ್ತಾ 25:40); ಎಷ್ಟು ಜನರು ಮಾನವ ಘನತೆಯನ್ನು ಎತ್ತಿ ಹಿಡಿಯುತ್ತಾ ಪ್ರೀತಿಯ ಆನಂದಕ್ಕೆ ಸಾಕ್ಷಿಯಾಗಿದ್ದಾರೆ! ಈ ಕ್ರಿಸ್ತೀಯ ಅನುಭವಗಳು ಯುವ ಜನರಿಗೆ ವೃತ್ತಿಯಲ್ಲಿ ಯಶಸ್ಸನ್ನು ಮಾತ್ರವಲ್ಲ, ಇತರರ ಜೀವನವನ್ನು ಉತ್ತಮಗೊಳಿಸಲು ದೈವದತ್ತ ಕೊಡುಗೆಗಳನ್ನು ಅಭಿವೃದ್ಧಿಗೊಳಿಸಿ ಪೋಷಿಸಲು ತರಬೇತಿ ಮತ್ತು ಶಿಕ್ಷಣವನ್ನು ನೀಡುತ್ತಿವೆ?

ವಿಶ್ವಗುರುಗಳ ಸುವಾರ್ತಾ ಪ್ರಸಾರ ಸಂಸ್ಥೆಗಳು ಶುಭಸಂದೇಶದ ಪ್ರಬೋಧನೆಗೆ ಪೋಷಕ ಸಾಧನಗಳಾಗಿ ಯುವ ಹೃದಯಗಳಿಂದ ಸತ್ಯದ ಅರಿವಿಗೆ ಬಾಯಾರಿದವರ ಮಾನವ ಮತ್ತು ಅವರ ಸಂಸ್ಕೃತಿಗೆ ಕೊಡುಗೆಯಾಗಿ ಜನ್ಮ ತಳೆದವು. ಪ್ರಾರ್ಥನೆ ಮತ್ತು ವಸ್ತುಗಳ ಉದಾರ ಕೊಡುಗೆ ಮತ್ತು ಜಗದ್ಗುರುಗಳ ಸುವಾರ್ತಾ ಪ್ರಸಾರ ಸಂಸ್ಥೆಯಿಂದ ಹಂಚಿಕೆ ಖಾತರಿಪಡಿಸುವುದು ಏನೆಂದರೆ: ವೈಯಕ್ತಿಕ ಕೊರತೆಯಲ್ಲಿ ಸಹಾಯ ಪಡೆದವರು ತಮ್ಮ ದೈನಂದಿನ ಜೀವನದಲ್ಲಿ ಶುಭಸಂದೇಶಕ್ಕೆ ಸಾಕ್ಷಿಯಾಗಿರುವರು. ಯಾರೊಬ್ಬರೂ ತಮ್ಮಲ್ಲಿರುವುದನ್ನು ಕೊಡಲಾಗದಷ್ಟು ಬಡವರಲ್ಲ, ವಾಸ್ತವವಾಗಿ ಅಂಥವರೇ ಪ್ರಥಮ ಮತ್ತು ಪ್ರಮುಖವಾಗಿ ದಾನಿಗಳೇ ಆಗಿದ್ದಾರೆ. ನಾನು ಚಿಲಿಯಲ್ಲಿ ಯುವ ಜನರನ್ನು ಪ್ರೋತ್ಸಾಹಿಸಲು ಆಡಿದ ಮಾತುಗಳನ್ನು ಪುನರಾವರ್ತಿಸುತ್ತೇನೆ: "ಕೊಡಲು ನಿಮ್ಮಲ್ಲಿ ಏನೂ ಇಲ್ಲವೆಂದು ಚಿಂತಿಸಬೇಡಿ ಅಥವಾ ನೀವು ಯಾರಿಗೂ ಬೇಡವಾಗದವರು ಎಂದು ಭಾವಿಸಬೇಡಿ. ಅನೇಕ ಜನರು ನಿಮ್ಮ ಅಗತ್ಯದಲ್ಲಿದ್ದಾರೆ. ಇದರ ಬಗ್ಗೆ ಯೋಚಿಸಿ! ನಿಮ್ಮಲ್ಲಿ ಒಬ್ಬೊಬ್ಬರೂ ನಿಮ್ಮ

ಹೃದಯದಲ್ಲಿ ಯೋಚಿಸಿ. ಅನೇಕ ಜನರು ನಿಮ್ಮ ಅಗತ್ಯದಲ್ಲಿದ್ದಾರೆ" (ಮೈಪು ಪುಣ್ಯಕ್ಷೇತ್ರದಲ್ಲಿ ಯುವಜನರ ಭೇಟಿ, 17 ಜನವರಿ 2018).

ಪ್ರೀತಿಯ ಯುವಜನರೇ, ಮುಂದಿನ ಅಕ್ಟೋಬರ್ ಸುವಾರ್ತಾ ಪ್ರಸಾರದ ತಿಂಗಳಾಗಿದ್ದು ನಾವು ನಿಮಗಾಗಿ ಆಯೋಜಿಸಿದ ಸಿನೋಡ್ ಸಭೆ ಜರುಗುತ್ತದೆ. ಇದು ನಮ್ಮನ್ನೇ ಸುವಾರ್ತಾ ಶಿಷ್ಯರನ್ನಾಗಿಸಿಕೊಳ್ಳಲು ಇನ್ನೊಂದು ಅವಕಾಶವನ್ನು ಕಲ್ಪಿಸಿಕೊಡಲಿದೆ. ಈ ಶಿಷ್ಯರು ಯೇಸುಸ್ವಾಮಿಗೆ ಸಂಪೂರ್ಣ ಸಮರ್ಪಿತರಾಗಿದ್ದು ಭೂಲೋಕದ ಅಂತ್ಯದಲ್ಲಿ ಸುವಾರ್ತೆಯನ್ನು ಸಾರುವರು. ನಾನು ಪ್ರೇಷಿತರ ರಾಣಿ ಮರಿಯಮ್ಮನವರನ್ನು, ಸಂತ ಫ್ರಾನ್ಸಿಸ್ ಕ್ಸೇವಿಯರ್, ಬಾಲ ಯೇಸುವಿನ ಸಂತ ತೆರೆಜ ಮತ್ತು ಪುನೀತ ಪೌಲೊ ಮನ್ನರವರು ನಮ್ಮೆಲ್ಲರಿಗಾಗಿ ವಿನಂತಿಸಲಿ ಮತ್ತು ಸದಾ ನಮ್ಮ ಪ್ರಾರ್ಥನೆಗಳೊಡನೆ ಇರಲೆಂದು ಪ್ರಾರ್ಥಿಸುತ್ತೇನೆ.

ವ್ಯಾಟಿಕನ್ ನಗರ **ಫ್ರಾನ್ಸಿಸ್**
ಮೇ 20, 2018
ಪಂಚದಶಮಿ ಮಹೋತ್ಸವ

ಅನುವಾದ: **ವಂ. ಸ್ವಾಮಿ ಜಾರ್ಜ್ ಡಿಸೋಜ**
ಚಿಕ್ಕಮಗಳೂರು

## 15. ಅತಿ ವಂ. ಸ್ವಾಮಿ ಜೆರೋಂ ರೇಗೊ

ವಿವರಗಳಿಗೆ ದಯವಿಟ್ಟು 27 ನ್ನು ನೋಡಿ.

ಶುಭಕಾಮನೆಗಳೊಂದಿಗೆ ದೇವರ ಆಶೀರ್ವಾದಗಳನ್ನು ಕೋರುತ್ತ,

ಸಹಿ/–

✠ **ಪೀಟರ್ ಮಚಾದೊ**
ಬೆಂಗಳೂರು ಮಹಾಧರ್ಮಾಧ್ಯಕ್ಷರು